ನಿರ್ದಾಕ್ಷಿಣ್ಯವಾಗಿ ಕೊಂದು ಹಾಕಿದ ಅನೇಕ ಉದಾಹರಣೆಗಳಿವೆ. ಅವನನ್ನು ಸಹಿಸಿ ಸಹಿಸಿ ಸಾಕಾಗಿ ಆಗಿನ ಪ್ರಧಾನಿ ಇಂದಿರಾ ಗಾಂಧಿ ಸ್ವರ್ಣ ಮಂದಿರಕ್ಕೆ ಸೇನೆ ನುಗ್ಗಿಸಿ ಬಿಂದ್ರನ್‌ವಾಲೆಯನ್ನು ಕೊಲ್ಲಿಸಿದರು. ಆ ಘಟನೆಗೆ ಆಪರೇಶನ್ ಬ್ಲೂ ಸ್ಟಾರ್ ಎಂದು ಹೆಸರಿಟ್ಟಿದ್ದರು. ಅದಕ್ಕೆ ಪ್ರತೀಕಾರವಾಗಿ ಇಂದಿರಾ ಗಾಂಧಿಯನ್ನು ಅವರ ರಕ್ಷಣಾ ಭಟರಿಂದಲೇ ಕೊಲ್ಲಿಸುವ ಸಂಚನ್ನು ಆ ಸಭೆಯಲ್ಲಿ ರೂಪಿಸಲಾಯಿತು. ನಾನು ನಖಶಿಖಾಂತ ಬೆವರಿಬಿಟ್ಟೆ. ಆದರೆ, ತೋರ್ಪಡಿಸಲಿಲ್ಲ. ಇಂದಿರಾ ಹತ್ಯೆಯ ಯೋಜನೆ ರೂಪಿಸಿದ ಸಂತೋಷದಿಂದ ಒಬ್ಬ ಸಿಖ್ ಬೋಲೋ ತೋ ನಿಹಾಲ್ ಎಂದ. ಉಳಿದವರು ಸತ್ ಶ್ರೀ ಅಕಾಲ್ ಎಂದು ಬೊಬ್ಬಿಟ್ಟರು. ನನ್ನಿಂದ ಅದಕ್ಕೆ ದನಿ ಸೇರಿಸಲು ಸಾಧ್ಯವಾಗಲಿಲ್ಲ. ಅಂದು ರಾತ್ರಿ ನಾನು ಅಲ್ಲೇ ಉಳಕೊಂಡೆ."

ನಾನು ಆಶ್ಚರ್ಯದಿಂದ ಸ್ತಂಭೀಭೂತನಾಗಿ ಡಾ. ಸೋನಿಪತ್‌ರನ್ನೇ ನೋಡಿದೆ. ಮತ್ತೆ ಸಹಜ ಸ್ಥಿತಿಗೆ ಬಂದು ಕೇಳಿದೆ. "ನೀವಿದನ್ನು ಭಾರತ ಸರಕಾರಕ್ಕೆ ತಿಳಿಸಲಿಲ್ವಾ ಸರ್?"

"ತಿಳಿಸದೆ ಇರುತ್ತೀನಾ? ಲಂಡನ್‌ನ ಪ್ರಧಾನ ಅಂಚೆ ಕಚೇರಿಯಿಂದ ಏರ್‌ಮೇಲ್ ಲೆಟರ್ ಕಳಿಸಿದೆ. ಇಂಟರ್‌ನ್ಯಾಶನಲ್ ಕೇಬಲ್ ಮೂಲಕ – ಪ್ರೈಮ್ ಮಿನಿಸ್ಟರ್ಸ್ ಲೈಫ್ ಈಸ್ ಇನ್ ಡೇಂಜರ್. ರಿಮೂವ್ ಸಿಖ್ ಬಾಡಿ ಗಾರ್ಡ್ಸ್ ಎಂದು ತುರ್ತು ಸಂದೇಶ ಕಳಿಸಿದೆ. ಅದಾಗಿ ಎರಡು ತಿಂಗಳಲ್ಲಿ ಇಂದಿರಾ ಗಾಂಧಿಯವರ ಕೊಲೆ ನಡೆದು ಹೋಯಿತು. ಕೊಲೆಯಾದ ಮರುದಿನ ಇಂಡಿಯನ್ ಪ್ರೈಂ

